ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.
ಸಂಖ್ಯೆ : ವಾಇ : ಉ ನಿ : ಸುಮಪ : 2020–21 ದಿನಾಂಕ:03–04–2020

**ಪತ್ರಿಕಾ ಪ್ರಕಟಣೆ**

# ಹಸಿದವರ ಹಸಿವು ಇಂಗಿಸುವಲ್ಲಿ ಕಾರ್ಮಿಕ ಇಲಾಖೆಯ ಕಾರ್ಯಕ್ಕೆ ಉಪ ಮುಖ್ಯಮಂತ್ರಿ ಪ್ರಶಂಸೆ

**ಬೆಂಗಳೂರು, ಏಪ್ರಿಲ್ 3 ( ಕರ್ನಾಟಕ ವಾರ್ತೆ ) :**

ಕೇವಲ ಭಾರತದಲ್ಲಿ ಮಾತ್ರವಲ್ಲ, ಬಹುಶಃ ವಿಶ್ವದಲ್ಲೇ, ಸಂಕಷ್ಟದಲ್ಲಿ ಇರುವವರನ್ನು ಗುರುತಿಸಿ ತಂತ್ರಾಂಶದ ಬಳಕೆ ಹಾಗೂ ತಂತ್ರಜ್ಞಾನದ ನೆರವಿನಿಂದ ಅವರು ಇದ್ದ ಸ್ಥಳದಲ್ಲೇ ಸಕಾಲದಲ್ಲಿ ಊಟ ಒದಗಿಸಿ, ಹಸಿದವರ ಹಸಿವನ್ನು ಇಂಗಿಸುವುದರ ಜೊತೆಗೆ ಉತ್ತರದಾಯಿತ್ವ ಹಾಗೂ ಪಾರದರ್ಶಕತೆ ಕಾಯ್ದುಕೊಂಡ ಕಾರ್ಮಿಕ ಇಲಾಖೆಯ ಕಾರ್ಯವನ್ನು ಉಪ ಮುಖ್ಯಮಂತ್ರಿ ಡಾ ಸಿ ಎನ್ ಅಶ್ವಥನಾರಾಯಣ್ ಅವರು ಇಲ್ಲಿ ಇಂದು ಮುಕ್ತ ಕಂಠದಿಂದ ಪ್ರಶಂಸಿಸಿದರು.

ರಾಜ್ಯದಲ್ಲಿ ಕೋವಿಡ್–19 ಸೋಂಕು ವ್ಯಾಪಿಸದಂತೆ ಎಲ್ಲೆಡೆ ಲಾಕ್ ಡೌನ್ ಘೋಷಿಸಿರುವ ಸಂದರ್ಭದಲ್ಲಿ ರಾಜ್ಯದ ರಾಜಧಾನಿಯಲ್ಲಿ ಸಂಕಷ್ಟದಲ್ಲಿ ಸಿಲುಕಿಕೊಂಡಿರುವ ಕಟ್ಟಡ ಕಾರ್ಮಿಕರು ಹಾಗೂ ವಲಸೆ ಕಾರ್ಮಿಕರನ್ನು ಗುರುತಿಸಿ, ಅವರು ಇರುವ ಸ್ಥಳಕ್ಕೇ ತೆರಳಿ ಅನ್ನ ನೀಡುವ ಮಹತ್ಕಾರ್ಯಕ್ಕೆ ಚಾಲನೆ ನೀಡಿದ ಅವರು ಇದೇ ಸಂದರ್ಭದಲ್ಲಿ ಕಾರ್ಮಿಕ ಸಚಿವ ಅರೆಬೈಲ್ ಶಿವರಾಮ ಹೆಬ್ಬಾರ್ ಅವರನ್ನೂ ಕೂಡಾ ಮನಸಾರೆ ಅಭಿನಂದಿಸಿದರು.

ಮೊಬೈಲ್ ಆಪ್ ಮೂಲಕ ಮನೆ–ಮನೆಗೆ ಆಹಾರವನ್ನು ಸ್ವಿಗ್ಗಿ ಸಂಸ್ಥೆಯು ತನ್ನ ಸಾಮುದಾಯಿಕ ಜವಾಬ್ದಾರಿಯ ವ್ಯಾಪ್ತಿಯಲ್ಲಿ ಒದಗಿಸಿರುವ ವೇದಿಕೆಯನ್ನು ಬಳಸಿಕೊಂಡು ರೂಪಿಸಿರುವ ಕೊರೊನಾ ಸೈನಿಕರ ಕಾರ್ಯಪಡೆಯ ದಾಸೋಹ ಕೊಠಡಿಯನ್ನು ವೀಕ್ಷಿಸಿದ ಅವರು ಇತರೆ ರಾಜ್ಯಗಳೂ ರಾಜ್ಯ ಕಾರ್ಮಿಕ ಇಲಾಖೆಯ ಈ ಕಾರ್ಯವನ್ನು ಅನುಕರಣೆ ಮಾಡುವಂತಹುದಾಗಿದೆ ಎಂದು ಅಭಿಪ್ರಾಯಪಟ್ಟರು.

**ಇದೇ ಸಂದರ್ಭದಲ್ಲಿ ಸಹಕಾರ ಸಚಿವ ಎಸ್ ಟಿ ಸೂಮಶೇಖರ್, ಪೌರಾಡಳಿತ, ತೋಟಗಾರಿಕಾ ಮತ್ತು ರೇಷ್ಮೆ ಸಚಿವ ಎಂ ಸಿ ನಾರಾಯಣ ಗೌಡ, ಕಾರ್ಮಿಕ ಸಚಿವ ಅರೆಬೈಲ್ ಶಿವರಾಮ ಹೆಬ್ಬಾರ್ ಅವರೂ ತಂತ್ರಾಂಶದ ಪ್ರಾತ್ಯಕ್ಷಿಕೆಯನ್ನು ವೀಕ್ಷಿಸಿದರು.**

**ಕಾರ್ಮಿಕ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಕ್ಯಾಪ್ಟನ್ ಪಿ. ಮಣಿವಣ್ಣನ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಎಸ್ ಎನ್ ಸಿದ್ದರಾಮಪ್ಪ ಅವರೂ ಈ ಕಾರ್ಯಕ್ರಮದಲ್ಲಿ ಹಾಜರಿದ್ದರು.**

**********

**ಡಿ ಪಿ ಎಂ**

## <u>ಪೂರ್ವಸಿದ್ಧತೆ ಭಾರತೀಯ ರೈಲ್ವೆಯಲ್ಲಿ ಕೋವಿಡ್–19 ರೋಗಿಗಳ ಐಸೋಲೇಷನ್ ವಾರ್ಡ್</u>

**(ಕೋವಿಡ್–19 ಪೂರ್ವಸಿದ್ಧತಾ ಕ್ರಮ)**

**ಬೆಂಗಳೂರು, 03 ಏಪ್ರಿಲ್ 2020(ಕರ್ನಾಟಕ ವಾರ್ತೆ):** ದೇಶದಲ್ಲಿ ಹೆಚ್ಚುತ್ತಿರುವ ಕೋವಿಡ್–19 ಸೋಂಕು ಹರಡುವಿಕೆಯ ಹಿನ್ನೆಲೆಯಲ್ಲಿ ಐಸೋಲೇಷನ್ ವಾರ್ಡ್‌ಗಳನ್ನು ಹೆಚ್ಚಿಸಬೇಕಾದ ಅಗತ್ಯವಿರುವುದರಿಂದ ಭಾರತೀಯ ರೈಲ್ವೆಯು 5000 ಪ್ರಯಾಣಿಕ ಕೋಚ್‌ಗಳನ್ನು ಕೋವಿಡ್–19 ರೋಗಿಗಳ ಐಸೋಲೇಷನ್ ವಾರ್ಡ್‌ಗಳಾಗಿ ಪರಿವರ್ತಿಸಲು ಕ್ರಮ ಕೈಗೊಂಡಿದೆ.

ಈ ಕೋಚ್‌ಗಳ ಮಾದರಿಯನ್ನು ಭಾರತೀಯ ಸಶಸ್ತ್ರ ಪಡೆಗಳ ವೈದ್ಯಕೀಯ ಸೇವೆಗಳು, ಭಾರತೀಯ ರೈಲ್ವೆಯ ವೈದ್ಯಕೀಯ ಇಲಾಖೆ ಹಾಗೂ ಆಯುಷ್ಮಾನ್ ಭಾರತ್ ಇಲಾಖೆಯ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಲಾಗಿದೆ.

ಈ ಕೋಚ್‌ಗಳನ್ನು ಐಸೋಲೇಷನ್ ವಾರ್ಡ್‌ಗಳಲ್ಲಿ ಅಗತ್ಯವಿರುವ ವೈದ್ಯಕೀಯ ಸೌಲಭ್ಯಗಳ ಅಗತ್ಯತೆಯನ್ನು ಪರಿಗಣಿಸಿ, ಮಾರ್ಪಡಿಸಲಾಗುತ್ತದೆ. ಈ ಕೋಚ್‌ಗಳು ಮೊಬೈಲ್ ಮತ್ತು ಲಾಪ್‌ಟಾಪ್ ಚಾರ್ಜರ್ ಪಾಯಿಂಟ್‌ಗಳನ್ನು, ಸೊಳ್ಳೆ ಪರದೆ ಮುಂತಾದ ಸೌಲಭ್ಯಗಳನ್ನು ಒಳಗೊಂಡಿರುತ್ತದೆ. ವೈದ್ಯಕೀಯ ಮತ್ತು ಅರೆವೈದ್ಯಕೀಯ ಸಿಬ್ಬಂದಿಯು ತಂಗಲು ಸಹ ನೀಡಲಾಗಿದೆ. ಪ್ರತಿ ಕೋಚ್ ಎಂಟು ರೋಗಿಗಳಿಗೆ ಅಗತ್ಯವಿರುವ ಸವಲತ್ತುಗಳನ್ನು ಹೊಂದಿರುತ್ತದೆ.

ನೈರುತ್ಯ ರೈಲ್ವೆಯು 312 ಪ್ರಯಾಣಿಕರ ಕೋಚ್‌ಗಳನ್ನು ಐಸೋಲೇಷನ್ ವಾರ್ಡ್‌ಗಳನ್ನಾಗಿ ಪರಿವರ್ತಿಸಲು ಗುರಿ ಹೊಂದಿದ್ದು,. ದಿನವೊಂದಕ್ಕೆ ಸರಾಸರಿ 20 ಕೋಚ್‌ಗಳನ್ನು ಪರಿರ್ತಿಸುವ ಕ್ಷಮತೆಯನ್ನು ನೈರುತ್ಯ ರೈಲ್ವೆಯು

ಹೊಂದಿದೆ. ಪ್ರಸ್ತುತ ಹುಬ್ಬಳ್ಳಿಯಲ್ಲಿ 138 ಮೈಸೂರಿನಲ್ಲಿ 138 ಹಾಗೂ ಬೆಂಗಳೂರಿನಲ್ಲಿ 36 ಕೋಚ್‍ಗಳನ್ನು ಪರಿವರ್ತಿಸುವ ಕಾಮಗಾರಿಯು ಜಾರಿಯಲ್ಲಿದೆ ಹಾಗೂ ಒಟ್ಟಾರೆ 312 ಕೋಚ್‍ಗಳಲ್ಲಿ ಈಗಾಗಲೇ, 39 ಕೋಚ್‍ಗಳನ್ನು ಪರಿವರ್ತನೆಗೊಳಿಸಲಾಗಿದೆ.

ಸುಮಾರು 2500 ಮಂದಿಯನ್ನು ಪ್ರತ್ಯೇಕಿಸಲು ಈ ಕೋಚ್‍ಗಳು ನೆರವಿಗೆ ಬರುತ್ತವೆ. ಈ ಕೋಚ್‍ಗಳನ್ನು ರೈಲ್ವೆ ಸಂಪರ್ಕ ಹೊಂದಿರುವ ಯಾವುದೇ ಪ್ರದೇಶಕ್ಕೆ ಸ್ಥಳಾಂತರಿಸಬಹುದಾಗಿದೆ. ಕರ್ನಾಟಕ ಸರ್ಕಾರದ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಹಾಗೂ ನೈರುತ್ಯ ರೈಲ್ವೆಯು ಈ ಕೋಚ್‍ಗಳನ್ನು ಅಗತ್ಯದ ಸಂದರ್ಭದಲ್ಲಿ ಬಳಸಲು ಯೋಜಿಸಿದೆ ಎಂದು ಕರ್ನಾಟಕ ಸರ್ಕಾರದ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು ಪ್ರಕಟಣೆಯಲ್ಲಿ ತಿಳಿಸಿದೆ.

## Prepare Indian Railway Board Covid-19 isolation ward

**(COVID – 19 Preparedness)**

**Bengaluru,03 April 2020 (Karnataka Information):** In a bid to increase the country's capacity for isolation facilities, Indian Railways is converting sleeper class coaches into Covid – 19 isolation wards by modifying the coaches as per prototype issued by Railway Board to make them suitable to act as quarantine hubs. These coaches are clean, sanitized and have hygienic surroundings for the patients to comfortably recover.

Prototype of these coaches are developed in consultation with Armed Forces Medical Services, Medical Department of Railways and Ayushman Bharath. This coach isolation prototype has been issued by Railway Board on 30th Mar.2020.

The coaches will be equipped with basic facilities needed as per medical guidelines. Provision is being made for charging points of mobiles and laptops. Mosquito nets with space for paramedics etc are also being ensured. Each coach will provide 8 berth cabin for isolation facility.

South Western Railways is planning to initially modify 312 passenger coaches to meet the requirement of any possible exigency of keeping some Covid-19 patients in isolation as and when required by the Government.

These 312 coaches will be converted for isolation/quarantine wards at;

- Hubballi Workshop-138
- Mysuru Workshop-138
- Bengaluru Depot -36

So far, conversion of 39 coaches have been completed.

Around 2500 persons can be isolated through these coaches and these coaches can be moved at any time or place wherever rail net work is available. Infrastructure

Development Department of Government of Karnataka and South Western Railway are working to put this innovative coaches to use as and when required. says Press Release from Infrastructure Development Department, Government of Karnataka.

## ಧಾರ್ಮಿಕ ಸಭೆಯಲ್ಲಿ ಭಾಗವಹಿಸಿದವರು ವೈದ್ಯಕೀಯ ತಪಾಸಣೆಗೆ ಒಳಪಡಿ: ಕಾರಜೋಳ

ಬೆಂಗಳೂರು, 03 ಏಪ್ರಿಲ್ 2020(ಕರ್ನಾಟಕ ವಾರ್ತೆ): ಕರ್ನಾಟಕದಲ್ಲಿ ದಿನೇ ದಿನೇ ಕೊರೊನಾ ವೈರಸ್ ಹೆಚ್ಚಾಗುತ್ತಿರುವ ಕಾರಣ ನಿಜಾಮುದ್ದೀನ್ ಧರ್ಮ ಸಭೆಯಲ್ಲಿ ಭಾಗವಹಿಸಿದವರು ಹಾಗೂ ಹೊರ ರಾಜ್ಯ ಮತ್ತು ಹೊರದೇಶಗಳಿಂದ ಬಂದಂತಹವರು ಕಡ್ಡಾಯವಾಗಿ ಸ್ವಯಂ ಪ್ರೇರಣೆಯಿಂದ ವೈದ್ಯಕೀಯ ತಪಾಸಣೆಗೊಳಗಾಗಲು ಎಲ್ಲಾ ಮಹನೀಯರಲ್ಲಿ ವಿನಂತಿಸುತ್ತೇನೆ ಎಂದು ಉಪಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಎಂ ಕಾರಜೋಳ ಅವರು ತಿಳಿಸಿದ್ದಾರೆ.

ಅಂತಹ ಮಹನೀಯರು ವೈದ್ಯಕೀಯ ತಪಾಸಣೆಗೊಳಗಾಗುವುದನ್ನು ನಿರ್ಲಕ್ಷಿಸಿದಲ್ಲಿ ತಮ್ಮ ಜೀವಕ್ಕೂ ಮತ್ತು ತಮ್ಮ ಬಂಧು ಬಳಗದವರ ಜೀವಕ್ಕೂ ತೊಂದರೆ ಮಾಡಿದಂತಾಗುತ್ತದೆ. ಅಲ್ಲದೇ ಸಮುದಾಯದ ಸ್ವಾಸ್ಥ್ಯವನ್ನು ಹಾಳುಮಾಡಿದಂತಾಗುತ್ತದೆ. ಕಾರಣ ಎಲ್ಲಾ ಡಿ ಕರ್ನಾಟಕದಲ್ಲಿ ದಿನೇ ದಿನೇ ಕೊರೊನಾ ವೈರಸ್ ಹೆಚ್ಚಾಗುತ್ತಿರುವ ಕಾರಣ ನಿಜಾಮುದ್ದೀನ್ ಧರ್ಮ ಸಭೆಯಲ್ಲಿ ಭಾಗವಹಿಸಿದವರು ಹಾಗೂ ಹೊರ ರಾಜ್ಯ ಮತ್ತು ಹೊರದೇಶಗಳಿಂದ ಬಂದಂತಹವರು ಕಡ್ಡಾಯವಾಗಿ ಸ್ವಯಂ ಪ್ರೇರಣೆಯಿಂದ ವೈದ್ಯಕೀಯ ತಪಾಸಣೆಗೊಳಗಾಗಲು ಎಲ್ಲಾ ಮಹನೀಯರಲ್ಲಿ ವಿನಂತಿಸುತ್ತೇನೆ ಎಂದು ಉಪಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಎಂ ಕಾರಜೋಳ ಅವರು ತಿಳಿಸಿದ್ದಾರೆ.

ಅಂತಹ ಮಹನೀಯರು ವೈದ್ಯಕೀಯ ತಪಾಸಣೆಗೊಳಗಾಗುವುದನ್ನು ನಿರ್ಲಕ್ಷಿಸಿದಲ್ಲಿ ತಮ್ಮ ಜೀವಕ್ಕೂ ಮತ್ತು ತಮ್ಮ ಬಂಧು ಬಳಗದವರ ಜೀವಕ್ಕೂ ತೊಂದರೆ ಮಾಡಿದಂತಾಗುತ್ತದೆ. ಅಲ್ಲದೇ ಸಮುದಾಯದ ಸ್ವಾಸ್ಥ್ಯವನ್ನು ಹಾಳುಮಾಡಿದಂತಾಗುತ್ತದೆ. ಕಾರಣ ಎಲ್ಲಾ ಮಹನೀಯರು ಸಹಕರಿಸಲು ಮತ್ತೊಮ್ಮೆ ಮನವಿ ಮಾಡಿದರು.

ತಪ್ಪಿದಲ್ಲಿ ಅಂತಹವವರಿಗೆ ಕಠಿಣ ಶಿಕ್ಷೆ ವಿಧಿಸಲು ಸರ್ಕಾರ ಈಗಾಗಲೇ ಜಿಲ್ಲಾಡಳಿತಗಳಿಗೆ ಮತ್ತು ತಾಲೂಕು ಆಡಳಿತಗಳಿಗೆ ಸೂಚನೆ ನೀಡಲಾಗಿದೆ ಎನ್ನುವ ಎಚ್ಚರಿಕೆಯನ್ನು ಕೊಡಬಯಸುತ್ತೇನೆ. ಸಾರ್ವಜನಿಕರು ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಸೂಚಿಸಿರುವ ಎಲ್ಲಾ ನಿಯಮಗಳನ್ನು ಪಾಲಿಸಿ ಮನೆಯಲ್ಲೇ ಇದ್ದು ಸಹಕರಿಸಬೇಕು ಎಂದು

ಮತ್ತು ದಿನಾಂಕ 5.4.2020 ರಂದು ರಾತ್ರಿ 9 ಗಂಟೆಗೆ ಮಾನ್ಯ  ಪ್ರಧಾನ ಮಂತ್ರಿಗಳು ಹೇಳಿರುವ ಸೂಚನೆಯನ್ನು ತಪ್ಪದೇ ಪಾಲಿಸಿ ಸರ್ಕಾರದೊಂದಿಗೆ ಸಹಕರಿಸಬೇಕು ಎಂದು ಅವರು ತಿಳಿಸಿದ್ದಾರೆ.